




‘ಸನ್‌ರೈಸರ್ಸ್ ಹೈದರಾಬಾದ್’ ತಂಡದ ನಾಯಕ ಡೇವಿಡ್ ವಾರ್ನರ್ ಪಾಲಿಗೆ ‘ಐಪಿಎಲ್ ಪಂದ್ಯಾವಳಿ’ ವಿಶ್ವಕಪ್‌ಗೆ ತಾಲೀಮಿನಂತೆ ಪರಿಣಮಿಸಿದೆ.

‘ಕೋಲ್ಕತ್ತಾ ಸನ್‌ರೈಸರ್ಸ್’ ತಂಡದ ವಿಜಯ್ ಶಂಕರ್ ಭಾರತೀಯ ಕ್ರಿಕೆಟ್‌ನಲ್ಲಿ ಗಮನಸೆಳೆಯುತ್ತಿರುವ ಹೊಸ ಪ್ರತಿಭೆ

ಘನತೆ ತಂದುಕೊಟ್ಟಿದ್ದರು. ಅದು 2009ರ ಸಂದರ್ಭ. ಹಾಗೆಂದು ಈಗಿನ ಬೌಲರ್‌ಗಳಲ್ಲಿ ಮೊನಚಿಲ್ಲ ಎಂದೇನೂ ಭಾವಿಸಬೇಕಿಲ್ಲ. ಬೂಮ್ರಾ ಐಪಿಎಲ್ ಅವಕಾಶವನ್ನು ಸಾಣೆಯಾಗಿಸಿಕೊಂಡಿದ್ದಾರೆ. ಭುವನೇಶ್ವರ್ ಸ್ವಿಂಗ್‌ಗಳು ಪರೀಕ್ಷೆಗೆ ಒಳಗಾಗುತ್ತಿವೆ. ಯಜುವೇಂದ್ರ ಚಾಹಲ್, ಅಕ್ಷರ್ ಪಟೇಲ್ ಕೂಡ ಮುಂಗೈಗೆ ಕೆಲಸ ಕೊಡುತ್ತಿದ್ದಾರೆ. ಆಸ್ಟ್ರೇಲಿಯಾದ ಜಂಪಾ ಇಲ್ಲಿನ ಸ್ಪಿನ್‌ಸ್ನೇಹಿ ಪಿಚ್‌ಗಳ ರಸಾಸ್ವಾದ ಅನುಭವಿಸುತ್ತಿದ್ದರೆ, ಹಳೆಯ ಸ್ಪಿನ್ ದಿಗ್ಗಜರಾದ ಹರಭಜನ್ ಸಿಂಗ್, ಅಮಿತ್ ಮಿಶ್ರ ಕೂಡ ‘ಇನ್ನೂ ನಮ್ಮಲ್ಲಿ ಕಸುವಿದೆ’ ಎಂದು ಪದೇ ಪದೇ ನಗುತ್ತಿದ್ದಾರೆ. ವಿಂಡೀಸ್‌ನ ಬ್ರಾವೋ ಚೆಂಡಿನ ವೇಗವೈವಿಧ್ಯದಿಂದ ಈಗಲೂ ಕಾಡಬಲ್ಲರು.

ವಿರಾಟ್ ಕೊಹ್ಲಿ ಅವರೇನೋ ಐಪಿಎಲ್ ಆಟ ನೋಡಿಕೊಂಡು ವಿಶ್ವಕಪ್‌ಗೆ ತಂಡ ಆಯ್ಕೆ ಮಾಡುವುದಿಲ್ಲ ಎಂದಿದ್ದಾರೆ. ಆದರೆ, ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು, ‘ಐಪಿಲ್ ಆಟದ ಮೇಲೆ ಆಯ್ಕೆದಾರರು ಒಂದು ಕಣ್ಣಿಟ್ಟೇ ಇಟ್ಟಿರುತ್ತಾರೆ’ ಎಂದಿರುವುದು ವಸ್ತುಸ್ಥಿತಿಯನ್ನು ಬಿಂಬಿಸುತ್ತದೆ. ಎಂಎಸ್‌ಕೆ ಪ್ರಸಾದ್ ನೇತೃತ್ವದ ಆಯ್ಕೆ ಸಮಿತಿಯು ಏಪ್ರಿಲ್ ನಡುಘಟ್ಟದಲ್ಲಿ ವಿಶ್ವಕಪ್‌ಗೆ ಸಂಭಾವ್ಯ ಆಟಗಾರರನ್ನು ಆರಿಸುವ ನಿರೀಕ್ಷೆಯಿದೆ. ಹೀಗಾಗಿಯೇ ಈ ಸಲದ ಐಪಿಎಲ್‌ನ ಪೂರ್ವಾರ್ಧದಲ್ಲಿ ಸ್ಪರ್ಧೆ ಏರ್ಪಟ್ಟಿರುವುದು ಖರೆ.

‘ಐಪಿಎಲ್ ಆಡುವಾಗ ರಾಜಸ್ಥಾನ ರಾಯಲ್ಸ್ ಬಗೆಗೆ ಮಾತ್ರ ನಾನು ಯೋಚಿಸುವೆ. ನನ್ನ ತಲೆಯಲ್ಲಿ ವಿಶ್ವಕಪ್ ಆಯ್ಕೆಯ ವಿಷಯ ಸುಳಿಯುವುದಿಲ್ಲ. ಇಲ್ಲಿ ಚೆನ್ನಾಗಿ ಆಡಿದರೆ ಎಂಥವರ ಕಣ್ಣೂ ನಮ್ಮ ಮೇಲೆ ಬಿದ್ದೇ ಬೀಳುವುದಲ್ಲವೇ’ ಎಂಬ ಸಹಜ ಪ್ರಶ್ನೆ ಅಜಿಂಕ್ಯ ರಹಾನೆ ಅವರದ್ದು.

ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ಮ್ಯಾಥ್ಯು ಹೇಡನ್ ಅಂತೂ ನೇರವಾಗಿ ‘ಅಂಬಟಿ ರಾಯುಡು ನನ್ನ ನೆಚ್ಚಿನ ಹುಡುಗ’ ಎಂದು ಕಣ್ಣು ಮಿಟುಕಿಸಿದ್ದಾರೆ. ಅವರ ಪ್ರಕಾರ, ರಾಯುಡು ಇನಿಂಗ್ಸ್ ಆರಂಭಿಸಲೂ ಯೋಗ್ಯ. ಇನ್ನೊಂದೆಡೆ ಶ್ರೇಯಸ್ ಅಯ್ಯರ್ ಬ್ಯಾಟ್ ತಿರುಗಿಸುತ್ತಾ ತಮ್ಮ ಅದೃಷ್ಟದ ಚಕ್ರ ತಿರುಗೀತೇ ಎಂದು ಚಾತಕಪಕ್ಷಿಯಾಗಿದ್ದಾರೆ.

ಆಸ್ಟ್ರೇಲಿಯಾದ ಗ್ಲೆನ್ ಮ್ಯಾಕ್ಸ್‌ವೆಲ್ ಆಗಲೀ, ಶೇನ್ ವ್ಯಾಟ್ಸನ್ ಆಗಲೀ ಆಗೀಗ ಫಾರ್ಮ್ ಕಳೆದುಕೊಂಡು ಮುಖಗಳ ಮೇಲೆ ಸುಕ್ಕು ಮೂಡಿಸಿಕೊಂಡವರೇ. ಅದರಲ್ಲೂ ಮ್ಯಾಕ್ಸ್‌ವೆಲ್ ಅಂತೂ ಚುಟುಕು ಕ್ರಿಕೆಟ್‌ನಲ್ಲಿ ಮಿಂಚಿದಷ್ಟು ಉಳಿದ ಮಾದರಿಗಳಲ್ಲಿ ಛಾಪು ಮೂಡಿಸಲೇ ಇಲ್ಲ. ಅವರಿಗೂ ತಮ್ಮ ವಿಶ್ವಕಪ್ ಆಯ್ಕೆ ಸಾಧ್ಯಮಾಡಿಕೊಳ್ಳಲು ಐಪಿಎಲ್ ಹೊಸ ಮಾರ್ಗ ಎನಿಸಿದೆ. ವಿಶ್ವಕಪ್ ಎದುರಲ್ಲಿ ಇರುವಾಗ ಐಪಿಎಲ್‌ನಲ್ಲಿ ಆಡಿ ದಣಿಯುವುದು ಥರವಲ್ಲ ಎಂದು ಕ್ರಿಕೆಟ್ ಆಸ್ಟ್ರೇಲಿಯಾದ ಕೆಲವರು ಬುದ್ಧಿ ಹೇಳಿದರೆ, ಇನ್ನು ಕೆಲವರು, ‘ಆಡಿ ತಪ್ಪುಗಳನ್ನು ತಿದ್ದಿಕೊಳ್ಳಲಿ ಬಿಡಿ’ ಎಂಬ ಧಾಟಿಯಲ್ಲಿ ಮಾತನಾಡಿದ್ದಾರೆ. ವಿಂಡೀಸರಿಗಂತೂ ಐಪಿಎಲ್ ಆಡುಂಬೊಲ.

ಆರ್‌ಸಿಬಿ ತಂಡವನ್ನು ಮೊದಲ ಪಂದ್ಯದಲ್ಲಿ ಕಟ್ಟಿಹಾಕಿ, ತಮ್ಮ ಹಳೆಯ ಶೈಲಿಯಲ್ಲಿ ನಗೆಯುಕ್ಕಿಸಿದ ಹರಭಜನ್ ಸಿಂಗ್, ಈಗಲೂ ಸಲೀಸಾಗಿ ಸಿಕ್ಸರ್ ಹೊಡೆಯಬಲ್ಲ ಸುರೇಶ್ ರೈನಾ, ರೋಗ ಮೀರಿ ಆಟದ ಪುನರುತ್ಥಾನ ಮಾಡಲು ಹೆಣಗಾಡಿ, ಪರದಾಡುತ್ತಲೇ ಇರುವ ಯುವರಾಜ್ ಸಿಂಗ್ – ಇವರದ್ದು ಇನ್ನೊಂದು ಬಣ. ಒಟ್ಟಿನಲ್ಲಿ ವಿಶ್ವಕಪ್ ಕನಸುಗಳಿಗೆ ಐಪಿಎಲ್ ಹಾಗೋ ಹೀಗೋ ಹಚ್ಚುತ್ತಿದೆ ರೆಕ್ಕೆ ಪುಕ್ಕ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in